

# ಬಾಳು ಕೊಡುವುದರ ಸುತ್ತ...

■ ಗೌರಿ

'ಬಾಳು ಕೊಡುವುದು' ಇದೊಂದು ಮಾತು ಕನ್ನಡ ಸಿನಿಮಾದಲ್ಲಿ ಎಷ್ಟು ಬಾರಿ ಬಳಕೆಯಾಗಿವೆ ಮತ್ತು ಯಾವೆಲ್ಲ ಸಂದರ್ಭದಲ್ಲಿ ಬಳಕೆಯಾಗಿದೆ ಎಂಬುದೇ ಒಂದು ದೊಡ್ಡ ಸಂಶೋಧನೆಯ ವಿಷಯವಾದೀತು. ಹೀಗೆ ಬಾಳು ಕೊಡುವ ಪರಿಕಲ್ಪನೆಯನ್ನು ನಿರ್ದೇಶಕ ಸೂರಿ 'ಜಂಗ್ಲಿ' ಸಿನಿಮಾದಲ್ಲಿ ರಂಗಾಯಣ ರಘು ಪಾತ್ರದ ಒಂದೇ ಸಂಭಾಷಣೆಯ ಮೂಲಕ ಲೇವಡಿ ಮಾಡಿರುವುದೂ ಇದೆ.

ಈ ಮಾತು ಬಳಕೆಯಾದ ಸಂದರ್ಭಗಳು, ಸನ್ನಿವೇಶಗಳು ಬೇರೆ ಬೇರೆ ಇದ್ದರೂ ಕೆಲವು ಸಾಮಾನ್ಯ ಅಂಶಗಳಂತೂ ಅವುಗಳಲ್ಲಿ ಇದ್ದೇ ಇರುತ್ತವೆ. ಅವು, ಆ ಮಾತನ್ನು ಒಬ್ಬ ಪುರುಷ ಹೆಣ್ಣಿಗೆ ಹೇಳುತ್ತಿರುತ್ತಾನೆ. ಆ ಹೆಣ್ಣು ದೀನಳೋ, ನಿರ್ಗತಿಕಳೋ, ವಿಧವೆಯೋ ಆಗಿರುತ್ತಾಳೆ. ಹೀಗೆಯೇ ಹೆಣ್ಣೊಬ್ಬಳು ಗಂಡಿಗೆ 'ಬಾಳು ಕೊಟ್ಟ' ಉದಾಹರಣೆಗಳು ನಮ್ಮ ಸಿನಿಮಾಗಳಲ್ಲಿ ಫ್ಲ್ಯಾಶ್‌ಲೈಟ್ ಹಾಕಿ, ವಿಶೇಷ ಲೆನ್ಸ್ ಹಾಕಿಕೊಂಡು ಜೂಮ್ ಮಾಡಿ ಹುಡುಕಿದರೂ ಸಿಗಲಾರದು. ಯಾಕೆಂದರೆ ಈ ಕಲ್ಪನೆಯ ಹಿಂದಿರುವುದು ಪುರುಷ ಮೇಲು ಮಹಿಳೆ ಕೀಳು ಎಂಬ ಮನಸ್ಥಿತಿ. ಬಾಳೆಂಬುದು ಕೊಟ್ಟು ತೆಗೆದುಕೊಳ್ಳುವ ರೂಪಾಯಿಯಲ್ಲ, ಪರಸ್ಪರ ಸಮಾನವಾಗಿ ಹಂಚಿಕೊಂಡು ಸವಿಯಬೇಕಾದ ಫಲ ಎಂಬ ಸೂಕ್ಷ್ಮ ಸಂವೇದನೆ ಇಲ್ಲದಿರುವ ಮನಸ್ಥಿತಿಯಷ್ಟೇ ಬಾಳು ಕೊಡುವ ದತ್ತಿದಾನ ಕಾರ್ಯಕ್ರಮಕ್ಕೆ ಮುಂದಾದೀತು.

ಈಗ ಇಷ್ಟು ಪೀಠಿಕೆ ಬರೆಯಲು ಕಾರಣವಾಗಿದ್ದು ಸಂತೋಷ್ ಆಚಾರ್ಯ ಅವರ 'ಅನುಸೂಯ' ಎಂಬ ಕಿರುಚಿತ್ರ. ಸಿನಿಮಾ ಮಾಧ್ಯಮದ ಕಲಿಕೆಯ ಹಂತದಲ್ಲಿ ರೂಪುಗೊಂಡ ಕಿರುಚಿತ್ರ ಎಂಬುದು ತಿಳಿಯುತ್ತವೆ. ಮತ್ತೆ ದೃಶ್ಯ ಮಾಧ್ಯಮವನ್ನು ಅರ್ಥ ಮಾಡಿಕೊಳ್ಳಲು ಅವರು ಶ್ರಮಿಸುತ್ತಿದ್ದಾರೆ ಎಂಬುದಕ್ಕೂ ಇಲ್ಲಿ ಹಲವು ಪುರಾವೆಗಳು ದೊರೆಯುತ್ತವೆ. ಆದರೆ ಯಾವುದೇ ಮಾಧ್ಯಮವಿರಲಿ, ಅದು ಕೊನೆಗೂ ಗೆಲ್ಲುವುದು ಅದನ್ನು ಬಳಸಿಕೊಳ್ಳುವ ಮನುಷ್ಯನ ಸಂವೇದನೆಗಳಿಂದಲೇ ಎಂಬುದನ್ನು ಅವರು ಮರೆತಂತಿದೆ. ತಾಂತ್ರಿಕವಾಗಿ ಎಷ್ಟೇ ಪರಿಣತಿ ಸಾಧಿಸಿದರೂ ಅದರ ಮೂಲಕ ನಾವು ಹೇಳುವುದು ಕಥೆಯನ್ನೇ. ಕಟ್ಟಿಕೊಡುವುದು ಕಥೆಗೆ ಗಾಢ ಅನುಭವದ ಇಮೇಜ್‌ಗಳನ್ನೇ. ತಾಂತ್ರಿಕ ಸಲಕರಣೆಗಳು, ನಟನೆ, ನಿರೂಪಣಾಕ್ರಮ, ಸಂಭಾಷಣೆ ಎಲ್ಲವೂ ಅಂಥ ಅನುಭವಗಳನ್ನು ರೂಪಿಸಲು ಇರುವ ಪರಿಕರಗಳಷ್ಟೆ.

ತರುಣನೊಬ್ಬ ಓರ್ವ ವೇಶ್ಯೆಗೆ 'ಬಾಳು ಕೊಡುವುದು' ಈ ಕಿರುಚಿತ್ರದ ಒಂದು ಸಾಲಿನ ಕಥೆ. ಇದೊಂದೇ ಸಾಲನ್ನು ತುಂಡಾಗಿ ಬೀಳುವಷ್ಟು ಕನ್ನಡ ಸಾಹಿತ್ಯ ಮತ್ತು ಸಿನಿಮಾಗಳಲ್ಲಿ ಉಜ್ಜಿಯಾಗಿದೆ. ಸಂತೋಷ್ ಆ ಸಾಲಿಗೆ ಹೊಸ ಅನುಭವವೇನಾದರೂ ಸೇರಿಸುತ್ತಾರೆಯೇ ಎಂದು ಏನೂ ಇಲ್ಲ. ಅಮ್ಮನ ಒಂದು ಕಥೆ ಮಗನಿಗೆ ವೇಶ್ಯೆಗೆ ಬಾಳು ಕೊಡಲು ಪ್ರೇರೇಪಿಸುತ್ತದೆ.

ಬೈಕ್ ಏರಿ ಹೊರಟು, ನಿನ್ನೆಯಷ್ಟೇ ಪರಿಚಯವಾದ ಆ ವೇಶ್ಯೆಯ ಮನೆಗೆ ಹೋಗಿ, ಬೈಕ್ ಮೇಲೆ ಕೂಡಿಸಿಕೊಂಡು ಮನೆ ಬಾಗಿಲಿಗೆ ಕರೆದುಕೊಂಡು ಬಂದು ಅಮ್ಮನಿಗೆ ಪರಿಚಯಿಸುತ್ತಾನೆ. ಓದಲು ಎಷ್ಟು ಸಿಲ್ಲಿಯಾಗಿದೆಯೋ, ನೋಡಲೂ ಅಷ್ಟೇ ಬಾಲಿಶ ಅನಿಸುತ್ತದೆ.

ಎಂಥ ಬಡತನದಲ್ಲಿರುವ ಹೆಣ್ಣಿಗೂ, ಎಷ್ಟು ಮಾನಸಿಕವಾಗಿ ಜರ್ಜರಿತವಾಗಿರುವ ಹೆಣ್ಣಿಗೂ, ಅವಳು ಮೈಮಾರಿಕೊಳ್ಳುವವಳೇ ಆಗಿದ್ದರೂ, ಯಾರೋ ಬಂದು ಕರೆದಾಕ್ಷಣ ಮಗುವನ್ನೆತ್ತಿಕೊಂಡು ಬೈಕ್ ಹತ್ತಿ ಕೂಡುವಷ್ಟು ಬದುಕು ಸರಳವಾಗಿಲ್ಲ ಎಂಬ ಅರಿವೂ ಇಲ್ಲದ ಕಾರಣ ಇಲ್ಲಿನ ಪಾತ್ರಗಳೆಲ್ಲವೂ ಆಡಿಸಿದಾತನ ಬೆರಳಸೂಚನೆಗೆ ಕುಣಿವ ತೊಗಲುಗೊಂಬೆಗಳ ಹಾಗೆ ಕಾಣುತ್ತವೆ. ಕೊನೆಯಲ್ಲಿ ಬಾಗಿಲಲ್ಲಿ ನಿಂತ ಹೆಣ್ಣಿನ ಬಗ್ಗೆ ಮಗ ಒಂದೂ ಮಾತು ಆಡದೆ ಹೋದರೂ ಅಮ್ಮನಿಗೆ, ಅವಳಿಗೆ ಗಂಡ ಇಲ್ಲ, ಮಗು ಇದೆ. ನನ್ನ ಹಾಗೆ ಸಮಾಜದಲ್ಲಿ ಕಷ್ಟ ಅನುಭವಿಸಿದ್ದಾಳೆ. ಹಾಗಾಗಿ ನಾನು ಅವಳನ್ನು ಒಪ್ಪಿಕೊಳ್ಳಬೇಕು ಎಂಬುದೆಲ್ಲ ಹೊಳೆದುಬಿಡುವುದು ಕಾಲಜ್ಞಾನದ ಸಮೀಪದ ಸ್ಥಿತಿಯೆಂದು ಅರ್ಥಮಾಡಿಕೊಳ್ಳಬೇಕಷ್ಟೆ.

ಭಾಷೆ, ಧ್ವನಿ ಸಂಯೋಜನೆ, ನಿರೂಪಣೆ ಎಲ್ಲವೂ ಒಟ್ಟಾರೆ ಕಥೆಯಲ್ಲಿನ ಕೃತಕಗುಣವನ್ನೇ ಹೊಂದಿವೆ. ಈಗಿನ ಕಾಲದಲ್ಲಿಯೂ 'ಬಾಳು' ಗಂಡು ಹೆಣ್ಣಿಗೆ ಕರುಣಿಸುವ ಪ್ರಸಾದ ಎಂದು ಭಾವಿಸಿಕೊಂಡವರಿಗೆ ಈ ಕಿರುಚಿತ್ರ ಇಷ್ಟವಾಗಬಹುದು.

ಹೆಸರು: ಅನುಸೂಯ (ಕನ್ನಡ)
ನಿರ್ದೇಶನ: ಸಂತೋಷ್ ಆಚಾರ್ಯ
ನಿರ್ಮಾಣ: ಚಂದ್ರಜಾ ಕ್ರಿಯೇಷನ್ಸ್
ಛಾಯಾಗ್ರಹಣ: ಆರ್. ಯೋಗೀಶ್ ಉಡುಪ
ಸಂಗೀತ: ನಿಶಾಂತ್ ಕಿರಣ್
ತಾರಾಗಣ: ಗೀತಾ ಸುರತ್ಕಲ್, ಸುಖೀತ್ ಆಚಾರ್ಯ, ಪ್ರೀತಿ ಗೌಡ, ಮಾಸ್ಟರ್ ಮಹಮ್ಮದ್ ಇಬ್ರಾಹಿಂ

ಕಿರುಚಿತ್ರ ವೀಕ್ಷಣೆಗೆ https://bit.ly/3uMEFzK ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.